# ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

## ಸತ್ರ ಪ್ರಕರಣ ಸಂಖ್ಯೆ: 5048/2022

ಪ್ರಾ ಸಾ 28 ಚಾ ಸಾ 58

ಹೆಸರುಃ ಸುನಿಲ್ ಕುಮಾರ್ ಎಸ್ ಆರ್

ತಂದೆಯ ಹೆಸರುಃ ರಾಮಕೃಷ್ಣೇಗೌಡ

ವಯಸ್ಸುಃ 38 ವರ್ಷ

ಉದ್ಯೋಗಃ ಸಿಸಿ ಕ್ಯಾಮೆರಾ ಟೆಕ್ನಿಷಿಯನ್

ವಾಸಃ ಮೈಸೂರು .

**ದಿಃ 28.03.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ನಾನು ಕಳೆದ 12 ವರುಷದಿಂದ ಸಿಸಿ ಕ್ಯಾಮೆರಾ ಟೆಕ್ನಿಷಿಯನ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಮೈಸೂರು, ಮಂಡ್ಯ , ಹಾಸನ , ಚಾಮರಾಜನಗರ ಮುಂತಾದ ಕಡೆಗಳಿಗೆ ಹೋಗಿ ಸಿಸಿ ಕ್ಯಾಮೆರಾದ ಟೆಕ್ನಿಷಿಯನ್ ಆಗಿ ಕೆಲಸ ಮಾಡುತ್ತಿದ್ದೇನೆ .

2. ದಿಃ 11.2.22 ರಂದು ಕೆ ಆರ್ ಸಾಗರದ ವೃತ್ತ ನಿರೀಕ್ಷಕರಾದ ಪುನೀತ್ ರವರು ನನಗೆ ಪೋನ್ ಮಾಡಿ ಕೆ ಆರ್ ಸಾಗರದ ಠಾಣೆಗೆ ನನ್ನನ್ನು ಬರಮಾಡಿಕೊಂಡಿದ್ದರು . ನಾನು ಅಲ್ಲಿಗೆ ಹೋದ ನಂತರದಲ್ಲಿ ಒಂದು ಕೊಲೆ ಪ್ರಕರಣವಾಗಿದೆ . ಅದಕ್ಕೆ ಸಂಬಂಧಪಟ್ಟ ಆರೋಪಿ ಹೋದ ಕಡೆ ಎಲ್ಲಾ ಇರುವ ಸಿಸಿ ಕ್ಯಾಮೆರಾದ ದೃಶ್ಯಾವಳಿಗಳನ್ನು ತೆಗೆದುಕೊಡಬೇಕು ಎಂದು ನನ್ನನ್ನು ಕೋರಿಕೊಂಡಿದ್ದಾರೆ.

3. ಕೆ ಆರ್ ಎಸ್ ನಲ್ಲಿರುವ ರಾಜುರವರ ಮನೆಗೆ ನನ್ನನ್ನು ಕರೆದುಕೊಂಡು ಹೋಗಿದ್ದಾರೆ. ನನ್ನ ಜೊತೆಯಲ್ಲಿ ಕೊಲೆಯಾದ ಹೆಂಗಸಿನ ಗಂಡ ಮತ್ತು ಇಬ್ಬರು ಇಂಜಿನಿಯರ್ ಗಳು ಇದ್ದರು .

4. ಅದರಂತೆ ನಾವೆಲ್ಲರೂ ರಾಜು ರವರ ಮನೆಗೆ ಹೋಗಿದ್ದೇವೆ . ಆ ಮನೆಯ ಮೊದಲನೆ ಮಹಡಿಯಲ್ಲಿ ಸಿಸಿ ಕ್ಯಾಮೆರಾಕ್ಕೆ ಸಂಬಂಧಪಟ್ಟ ಡಿವಿಆರ್ ನ್ನು ಇಟ್ಟಿದ್ದಾರೆ . ಆ ಡಿ ವಿ ಆರ್ ನ್ನು ಪರಿಶೀಲಿಸಿದಾಗ ಕ್ಯಾಮೆರಾ ನಂ 2 ರಲ್ಲಿ 6 ನೇ

ತಾರೀಖಿನಂದು ಬೆಳಗಿನ ಜಾವ 5 ಗಂಟೆ 2 ನಿಮಿಷದ ಸಮಯದಲ್ಲಿ ಒಬ್ಬ ಹೆಂಗಸು ಆರೆಂಜ್ ಮತ್ತು ಕೆಂಪು ಬಣ್ಣದ ಸೀರೆ ಉಟ್ಟುಕೊಂಡು ಹೋಗುತ್ತಿದುದು ಕಂಡುಬಂತು. ಆಕೆಯನ್ನು ಮೃತೆಯ ಗಂಡ ಗುರುತಿಸಿದ್ದಾನೆ. ಆ ದೃಶ್ಯಾವಳಿಯನ್ನು ಸ್ಯಾಂಡ್-ಡಿಸ್ಕ ಎಂಬ 32-ಜಿ.ಬಿ. ಸಾಮರ್ಥ್ಯದ ಪೆನ್ ಡ್ರೈವ್ ಗೆ ಕಾಪಿ ಮಾಡಿಕೊಂಡಿದ್ದೇನೆ .

5. ಸದರಿ ಪೆನ್ ಡ್ರೈವ್ ಅನ್ನು ಈಗ ನೋಡಿದೆ. ಅದನ್ನು ಈಗಾಗಲೇ ನಿಪಿ 5 ಎಂದು ಗುರುತಿಸಲಾಗಿದೆ .

6. ಸಾಕ್ಷಿಯು ನಿಪಿ 5 ರಲ್ಲಿರುವ ದೃಶ್ಯಾವಳಿಯನ್ನು ನೋಡಿಕೊಂಡು ಅದರಲ್ಲಿರುವ ಹೆಂಗಸು ಹೆಗಲ ಮೇಲೆ ಒಂದು ಚೀಲವನ್ನು ಹಿಡಿದುಕೊಂಡು ಹೋಗುತ್ತಿರುವುದು ಕಂಡುಬರುತ್ತದೆ .

7. ಆ ಸಂದರ್ಭದಲ್ಲಿ ಪೊಲೀಸರು ಒಂದು ಮಹಜರು ಮಾಡಿ ನನ್ನ ರುಜುವನ್ನು ಪಡೆದುಕೊಂಡಿದ್ದಾರೆ . ಸದರಿ ದಾಖಲೆಯನ್ನು ಈಗ ನೋಡಿದೆ . ಅದರಲ್ಲಿ ನನ್ನ ರುಜು ಇದೆ .

ಸಾಕ್ಷಿ ಗುರುತಿಸಿದ ದಾಖಲೆಯನ್ನು ನಿಪಿ 4 ಮತ್ತು ಸಾಕ್ಷಿಯ ರುಜುವನ್ನು 4 ಡಿ ಎಂದು ಗುರುತಿಸಲಾಯಿತು.

8. ಆ ಸಂದರ್ಭದಲ್ಲಿ ನಾಲ್ಕು ಫೊಟೋಗಳನ್ನು ನಿಪಿ 6 ರಂತೆ ತೆಗೆದಿರುತ್ತಾರೆ . ಆ ಫೊಟೋದಲ್ಲಿ ಪಿಂಕ್ ಬಣ್ಣದ ಟೀ ಶರ್ಟ್ ಧರಿಸಿರುವ ಪೊಲೀಸ್ ನಿರೀಕ್ಷಕರ ಬಲಭಾಗದಲ್ಲಿ ಕುಳಿತಿರುವ ವ್ಯಕ್ತಿ ನಾನು .

9. ಅದಾದ ನಂತರ ನನ್ನನ್ನು ಅದೇ ದಿನ ಕೆ ಆರ್ ಸಾಗರದ ಬೃಂದಾವನ ಗಾರ್ಡ್ ನಲ್ಲಿರುವ ಸೆಕ್ಯುರಿಟಿ ಮಾನಿಟರ್ ರೂಂ ಗೆ ಕರೆದುಕೊಂಡು ಹೋಗಿದ್ದಾರೆ . ಅಲ್ಲಿಯೂ ಕೂಡ ನಾನು ಸಿಸಿಕ್ಯಾಮೆರಾದ ಬ್ಯಾಕ್ ಅಪ್ ಅನ್ನು ದಿಃ 6.2.22 ರ ಬೆಳಗಿನ ಜಾವ 5.34 ಗಂಟೆಯಿಂದ ನಂತರದ 1 ನಿಮಿಷದ ದೃಶ್ಯಾವಳಿಯನ್ನು ಸ್ಯಾಂಡಿಕ್ ಕಂಪನಿಯ 32 ಜಿಬಿಯ ನ್ಯಾಯಾಲಯದ ಮುಂದಿರುವ ನಿಪಿ 27 ರ ಪೆನ್ ಡ್ರೈವ್ ಮೂಲಕ ಸಂಗ್ರಹಿಸಿಕೊಟ್ಟಿದ್ದೇನೆ .

10. ನಾನು ಸಂಗ್ರಹಿಸಿಕೊಟ್ಟ ದೃಶ್ಯಾವಳಿಯ ಪ್ರಕಾರ

ಅರಳಿಕಟ್ಟೆಯಲ್ಲಿ ಒಬ್ಬ ಹೆಂಗಸು ಕುಳಿತುಕೊಂಡಿರುವುದು ಮತ್ತು ಬಸ್ ಬಂದ ತಕ್ಷಣ ಅದಕ್ಕೆ ಹತ್ತಿ ಹೋಗುತ್ತಿರುವುದು ಕಂಡುಬಂತು .

11. ಆ ರೀತಿ ದೃಶ್ಯಾವಳಿಯನ್ನು ಸಂಗ್ರಹಿಸಿಕೊಟ್ಟಾಗ ಪೊಲೀಸರು ನನ್ನ ಸಮಕ್ಷಮದಲ್ಲಿ ನಿಪಿ.26 ರೀತಿಯ ಪಂಚನಾಮೆ ಮಾಡಿ ನನ್ನ ರುಜುವನ್ನು 26 ಬಿ ಪಡೆದುಕೊಂಡಿದ್ದಾರೆ .

12. ಆ ದಿವಸ ನಾನು ಸಂಗ್ರಹಿಸಿಕೊಟ್ಟ ದೃಶ್ಯಾವಳಿಯನ್ನು ಈಗ ನೋಡಿದೆ . ಅದರ ಪ್ರಕಾರ ಒಬ್ಬ ಹೆಂಗಸು ಇರುವುದು ಕಂಡುಬರುತ್ತದೆ . ಸಾಕ್ಷಿ ನಿಪಿ 27 ರಲ್ಲಿರುವ ಮೊದಲನೆ ದೃಶ್ಯಾವಳಿಯನ್ನು ನೋಡಿಕೊಂಡು ಉತ್ತರಿಸಿದ್ದಾರೆ .

13. ನಿಪಿ 27 ರ ಪೆನ್ ಡ್ರೈವ್ ನಲ್ಲಿ ಕ್ಯಾಮೆರಾ ಸಂಃ 6 ರಲ್ಲಿ ದಾಖಲುಗೊಂಡಿರುವ ದೃಶ್ಯಾವಳಿ ಇದೆ . ಆ ದೃಶ್ಯಾವಳಿಯನ್ನು ಈಗ ನೋಡಿದೆ . ಆ ದೃಶ್ಯಾವಳಿಯ ಪ್ರಕಾರ ನಾರ್ತ್ ಬ್ಯಾಂಕ್ ಕಡೆಯಿಂದ ಬಂದ ಬಸ್ ಗೆ ಒಬ್ಬ

ಹೆಂಗಸು ಓಡಿಕೊಂಡು ಹೋಗಿ ಹತ್ತುತ್ತಿರುವುದು ಕಂಡುಬರುತ್ತದೆ .

14. ಎರಡನೇ ದೃಶ್ಯಾವಳಿಯು ದಿಃ 6.2.22 ರ ಬೆಳಗಿನ ಜಾವ 5.36 ರಿಂದ 5.43 ಸಮಯದ ವರೆಗಿನದ್ದು.

15. ಆ ರೀತಿ ದೃಶ್ಯಾವಳಿಗಳನ್ನು ಸಂಗ್ರಹಿಸುವ ಸಂದರ್ಭದಲ್ಲಿ ನಿಪಿ 28 ರಂತೆ 4 ಪೊಟೋಗಳನ್ನು ತೆಗೆಯಲಾಗಿದೆ .

16. ಮರುದಿನ ನನ್ನನ್ನು ಪೊಲೀಸರು ಬೆಲವತ್ತ ಗ್ರಾಮದ ವೆಂಕಟೇಶ್ ರವರ ಮನೆ ಮತ್ತು ಚಿಲ್ಲರೆ ಅಂಗಡಿಗೆ ಅಳವಡಿಸಲಾದ ಸಿಸಿಕ್ಯಾಮೆರಾದ ದೃಶ್ಯಾವಳಿಯನ್ನು ಸಂಗ್ರಹಿಸುವ ಸಂಬಂಧವಾಗಿ ಕರೆದುಕೊಂಡು ಹೋಗಿದ್ದಾರೆ .

17. ಅಲ್ಲಿಯ ಕ್ಯಾಮೆರಾ ಸಂಃ 1 ರ ದೃಶ್ಯಾವಳಿಯನ್ನು ಗಮನಿಸಿದಾಗ ದಿಃ 6.2.22 ರಂದು ಬೆಳಗ್ಗೆ 6.47 ನಿಮಿಷದಿಂದ 6.48 ಸಮಯದಲ್ಲಿ ಒಬ್ಬ ಮಹಿಳೆ ಬ್ಯಾಗನ್ನು ತೆಗೆದುಕೊಂಡು ವರುಣಾನಾಲೆಯ ಕಡೆಗೆ ಹೋಗುತ್ತಿರುವುದು ಮತ್ತು ಅದೇ ದಿನ 6.50 ನಿಮಿಷದಿಂದ 6.51 ನಿಮಿಷದ ಸಮಯದಲ್ಲಿ

ಬರಿಗೈನಲ್ಲಿ ವಾಪಸ್ ಬರುತ್ತಿರುವುದು ಕಂಡುಬರುತ್ತದೆ. ಆ ಸಂದರ್ಭದಲ್ಲೂ ಕೂಡ ಗಂಗಾರಾಮ್ ನಮ್ಮ ಜೊತೆಯಲ್ಲಿದ್ದರು. ಆತನು ಆ ಹೆಂಗಸು ಲಕ್ಷ್ಮಿ ಎಂದು ಗುರುತಿಸಿರುತ್ತಾನೆ.

18. ಸದರಿ ದೃಶ್ಯಾವಳಿಯನ್ನು ಸ್ಯಾನ್ ಡಿಸ್ಕ್ ಕಂಪನಿಯ 32 ಜಿಬಿ ಸಾಮರ್ಥ್ಯದ ನಿಪಿ 7 ರ ಪೆನ್ ಡ್ರೈವ್ ನಲ್ಲಿ ಸಂಗ್ರಹಿಸಿ ಪೊಲೀಸರಿಗೆ ಕೊಟ್ಟಾಗ ಅವರು ನಿಪಿ.8 ರಂತೆ ಪಂಚನಾಮೆ ಬರೆದು ನನ್ನ ರುಜುವನ್ನು 8 ಸಿ ರಂತೆ ಪಡೆದುಕೊಂಡು ಆ ಸಂದರ್ಭದಲ್ಲಿ ನಿಪಿ.9 ರೀತಿಯ 4 ಪೊಟೋಗಳನ್ನು ತೆಗೆದಿರುತ್ತಾರೆ .

ಪಾಟೀ ಸವಾಲು ಃ ಶ್ರೀ ಎಸ್ ಆರ್ ಎಸ್ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಿದೆ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)

**ಸಾಕ್ಷಿಗೆ ದಿನಾಂಕಃ 23.04.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ಶ್ರೀ ಎಸ್ ಆರ್ ಎಸ್ ವಕೀಲರಿಂದ**

19. ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ತಾಂತ್ರಿಕ ನೈಪುಣ್ಯತೆ ಕುರಿತು ಯಾವುದೇ ವಿಶ್ವ ವಿದ್ಯಾಲಯದಿಂದ ಪದವಿಯನ್ನು ಪಡೆದಿರುವುದಿಲ್ಲ, ಸಾಕ್ಷಿಯು ಸ್ವತಃ ನೈಪುಣ್ಯತೆಗಾಗಿ ತರಬೇತಿಗೆ ಸೇರಿದ್ದೆ, ಆದರೆ ಪೂರ್ತಿಗೊಳಿಸಿಲ್ಲ ಎಂದು ಉತ್ತರಿಸಿದ್ದಾರೆ.

20. ನಾನು ಸಿಸಿ ಕ್ಯಾಮರಾದ ಟೆಕ್ನಿಷಿಯನ್ ಎಂದು ತೋರಿಸಲು ಯಾವುದೇ ಅಧಿಕೃತ ದಾಖಲೆಯನ್ನು ಹಾಜರುಪಡಿಸಿಲ್ಲ. ನಾನು ಸಿಸಿ ಕ್ಯಾಮಾರಕ್ಕೆ ಸಂಬಂಧಪಟ್ಟ ಅಂಗಡಿಯಲ್ಲಿ ಕೆಲಸ ಮಾಡುತ್ತೇನೆ, ಆದರೆ ಆ ರೀತಿ ನಾನು ಕೆಲಸ ಮಾಡುವ ಅಂಗಡಿ ಇದೆ ಎಂದು ತೋರಿಸಲು ಲೈಸೆನ್ಸ್ ನಂತಹ ದಾಖಲೆಯನ್ನು ಹಾಜರುಪಡಿಸಿಲ್ಲ.

21. ಒಂದು ಡಿವೈಸ್ ನಲ್ಲಿ ಇದ್ದ ಬ್ಯಾಕ್‌ಅಪ್ ನ್ನು ತೆಗೆದುಕೊಟ್ಟ ಕಾರಣಕ್ಕಾಗಿ ನಾನು ಆ ದೃಶ್ಯಾವಳಿ ನೈಜ ದೃಶ್ಯಾವಳಿ ಎಂದು ಬಾವಿಸಿದ್ದೇನೆ.

22. ನಾನು ರಾಜುವಿನ ಮನೆಗೆ ಹೋದ ತಕ್ಷಣ ಅಲ್ಲಿದ್ದ ಡಿವಿಆರ್ ನ್ನು ಪರಿಶೀಲನೆ ಮಾಡಿರುತ್ತೇನೆ. ಆ ಡಿವೈಸ್ ಒಂದು

ಟಿ.ಬಿ. ಯ ಹಾರ್ಡ್‌ಡಿಸ್ಕ್ ಆಗಿತ್ತು, ಅಂತಹ ಸಾಮರ್ಥ್ಯದ ಹಾರ್ಡ್‌ಡಿಸ್ಕ್ ನಲ್ಲಿ ಸುಮಾರು 15 ರಿಂದ 20 ದಿನಗಳ ದೃಶ್ಯಾವಳಿ ಶೇಖರಣೆಯಾಗಿರುತ್ತದೆ. ಆದರೆ ಆ ಡಿವಿಆರ್ ನಲ್ಲಿ ಯಾವ ತಾರೀಖಿನಿಂದ ದೃಶ್ಯಾವಳಿಗಳು ದಾಖಲಾಗಿದ್ದವು ಎಂಬ ಪ್ರಶ್ನೆಗೆ ಸಾಕ್ಷಿಯು 25.01.2022 ರಿಂದ 11.02.2022 ರ ವರೆಗಿನ ದೃಶ್ಯಾವಳಿಗಳು ದಾಖಲಾಗಿದ್ದವು ಎಂದು ಉತ್ತರಿಸಿದ್ದಾರೆ. ಈ ವಿಚಾರವನ್ನು ನಾನು ಅಂದಾಜಿನಲ್ಲಿ ತಿಳಿಸಿದ್ದೇನೆ.

23. ಪೆನ್‌ಡ್ರೈವ್ ನಲ್ಲಿರುವ ದೃಶ್ಯಾವಳಿಗಳು ಮೂಲ ದೃಶ್ಯಾವಳಿಗಳು ಅಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಡಿವಿಆರ್ ನಲ್ಲಿ ಇದ್ದ ದೃಶ್ಯಾವಳಿಗಳನ್ನು ಪೆನ್‌ಡ್ರೈವ್ ನಲ್ಲಿ ಸಂಗ್ರಹಿಸಿಕೊಟ್ಟಿದ್ದೇನೆ ಎಂದು ಉತ್ತರಿಸಿದ್ದಾರೆ. ಪೆನ್‌ಡ್ರೈವ್ ನಲ್ಲಿದ್ದ ದೃಶ್ಯಾವಳಿಗಳನ್ನು ಎಡಿಟ್ ಮಾಡಲು ಸಾಧವಿಲ್ಲ.

24. ಡಿವಿಆರ್ ನಲ್ಲಿದ್ದ ದೃಶ್ಯಾವಳಿಗಳು ಆ ಸಾಧನದಲ್ಲಿ ಮಾತ್ರ ಲಭ್ಯವಿರುತ್ತವೆ ಎಂಬ ಪ್ರಶ್ನೆಗೆ ಸಾಕ್ಷಿಯು ಆ ರೀತಿ ಇದ್ದ ದೃಶ್ಯಾವಳಿಯನ್ನು ಪೆನ್‌ಡ್ರೈವ್ ನಲ್ಲಿ ಸಂಗ್ರಹಿಸಿಕೊಟ್ಟಿದ್ದೇನೆ ಎಂದು ಉತ್ತರಿಸಿದ್ದಾರೆ.

25. ನಿಪಿ.6 ರ ಪೋಟೋಗಳನ್ನು ನೋಡಿಕೊಂಡು ಅದರಲ್ಲಿರುವ ದೃಶ್ಯಾವಳಿಯ ಪ್ರಕಾರ ಆರೋಪಿಯನ್ನು ಗುರ್ತಿಸಿದವರು ಯಾರು ಎಂದು ನನಗೆ ತಿಳಿಸಲಾಗದು, ನಾನು ಕಂಪ್ಯೂಟರ್ ನಲ್ಲಿ ದೃಶ್ಯಾವಳಿಗಳನ್ನು ಮಾತ್ರ ನೋಡುತ್ತಿದ್ದೆ.

ನಿಪಿ.6 ರ ಮೊದಲನೆ ಪೋಟೋದಲ್ಲಿ ನಾನು ಪೋಟೋಗ್ರಾಫರ್ ನ್ನು ನೋಡುತ್ತಿರುವುದು ಕಂಡುಬರುತ್ತದೆ ಎನ್ನುವುದು ಸರಿ. ಆ ಪೋಟೋವನ್ನು ನೋಡಿಕೊಂಡು ಆರೋಪಿಯನ್ನು ಗುರ್ತಿಸಿದವರು ಯಾರು ಎಂದು ನನಗೆ ಗೊತ್ತಿಲ್ಲ. ದೃಶ್ಯಾವಳಿಯನ್ನು ನೋಡಿಕೊಂಡು ಆರೋಪಿಯನ್ನು ಯಾರು ಗುರ್ತಿಸಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ ಎನ್ನುವುದು ಸರಿ.

26. ನಿಪಿ.6 ರಲ್ಲಿ ಕಂಡುಬರುವ 3 ನೇ ಪೋಟೋವನ್ನು ನೋಡಿಕೊಂಡು ಅಲ್ಲಿ ಹಾದುಹೋಗಿರುವ ಹೆಂಗಸಿನ ಚಹರೆಯನ್ನು ಗುರ್ತಿಸಲಾಗದು ಎನ್ನುವುದು ಸರಿ, ಆದರೆ ದೃಶ್ಯಾವಳಿಯನ್ನು ನೋಡಿದರೆ ಗುರ್ತಿಸಬಹುದು. ನಿಪಿ.6 ರ ಪೋಟೋದಲ್ಲಿ ಮೃತೆಯ ಗಂಡ ಯಾರು ಎಂದು ನನಗೆ ಗುರ್ತಿಸಲು ಸಾಧ್ಯವಿಲ್ಲ.

27. ನಾನು ರಾಜುವಿನ ಮನೆಗೆ ಹೋಗಿ ತನಿಖಾಧಿಕಾರಿಗೆ ಸಹಕರಿಸಿದ ಕುರಿತು ಯಾವುದೇ ಶುಲ್ಕವನ್ನು ಪಡೆದಿರುವುದಿಲ್ಲ.

28. ನಾನು ರಾಜು ರವರ ಮನೆಗೆ ಹೋದಾಗಲೇ ಅವರ ಮನೆಗೆ ಅಳವಡಿಸಲಾದ ಕ್ಯಾಮರಗಳನ್ನು ನೋಡಿರುತ್ತೇನೆ. ನಾನು ನೋಡಿದಾಗ ಅವರ ಮನೆಗೆ ಮೂರು ಕ್ಯಾಮರಗಳನ್ನು ಅಳವಡಿಸಿದ್ದಾರು. ಆ ಮೂರು ಕ್ಯಾಮರಗಳು ಕಾರ್ಯ ನಿರ್ವಹಿಸುತ್ತಿದ್ದವು.

29. ದೃಶ್ಯಾವಳಿಗಳನ್ನು ನೋಡಲು ರಾಜು ರವರು ಕಂಪ್ಯೂಟರ್ ಮಾನಿಕಟರ್ ನ್ನು ಇಟ್ಟುಕೊಂಡಿದ್ದರು. ಕಂಪ್ಯೂಟರ್ ಮಾನಿಟರ್ ಗೆ ಸಮಯವನ್ನು ಫಿಕ್ಸ್ ಮಾಡಬಹುದು ಎನ್ನುವುದು ಸರಿಯಲ್ಲ. ಯಾವುದೇ ಡಿವೈಸ್ ನ್ನು ತೆರೆದಾಗ ಅದು ಸಮಯ ಮತ್ತು ದಿನಾಂಕವನ್ನು ತೋರಿಸುತ್ತದೆ, ಆ ಆಧಾರದಲ್ಲಿ ದೃಶ್ಯಾವಳಿಯ ಸಮಯವನ್ನು ತಿಳಿಸಿರುತ್ತೇನೆ.

30. ಸಮಯ ಮತ್ತು ದಿನಾಂಕವನ್ನು ಮ್ಯಾನ್ಯುವಲ್ ಆಗಿ ಬದಲಾಯಿಸಬಹುದು ಎನ್ನುವುದು ಸರಿ.

31. ಅದರಂತೆ ನಾವೆಲ್ಲರೂ ರಾಜು ರವರ ಮನೆಗೆ ಹೋಗಿದ್ದೇವೆ, ಆ ಮನೆಯ ಮೊದಲನೇ ಮಹಡಿಯಲ್ಲಿ ಸಿಸಿ ಕ್ಯಾಮೆರಾಕ್ಕೆ ಸಂಬಂಧಪಟ್ಟ ಡಿವಿಆರ್ ನ್ನು ಇಟ್ಟಿದ್ದರು, ಆ ಡಿ ವಿ ಆರ್ ನ್ನು ಪರಿಶೀಲಿಸಿದಾಗ ಕ್ಯಾಮೆರಾ ನಂ 2 ರಲ್ಲಿ, 6 ನೇ ತಾರೀಖಿನಂದು ಬೆಳಗಿನ ಜಾವ 5 ಗಂಟೆ 2 ನಿಮಿಷದ ಸಮಯದಲ್ಲಿ ಒಬ್ಬ ಹೆಂಗಸು ಆರೆಂಜ್ ಮತ್ತು ಕೆಂಪು ಬಣ್ಣದ ಸೀರೆ ಉಟ್ಟುಕೊಂಡು ಹೋಗುತ್ತಿದುದು ಕಂಡುಬಂತು, ಆಕೆಯನ್ನು ಮೃತೆಯ ಗಂಡ ಗುರುತಿಸಿದ್ದಾನೆ, ಆ ದೃಶ್ಯಾವಳಿಯನ್ನು ಸ್ಯಾಂಡ್-ಡಿಸ್ಕ್ ಎಂಬ 32-ಜಿ.ಬಿ. ಸಾಮರ್ಥ್ಯದ ಪೆನ್ ಡ್ರೈವ್ ಗೆ ಕಾಪಿ ಮಾಡಿಕೊಂಡಿದ್ದೇನೆ ಎಂದು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

32. ಸದರಿ ಪೆನ್ ಡ್ರೈವ್ ನಿಪಿ 5 ಎಂದು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಅದರಲ್ಲಿರುವ ದೃಶ್ಯಾವಳಿಯನ್ನು ಸೃಷ್ಟಿಸಿಕೊಳ್ಳಲಾಗಿದೆ ಎನ್ನುವುದು ಸರಿಯಲ್ಲ.

33. ಸಾಕ್ಷಿಯು ನಿಪಿ 5 ರಲ್ಲಿರುವ ದೃಶ್ಯಾವಳಿಯನ್ನು ನೋಡಿಕೊಂಡು ಅದರಲ್ಲಿರುವ ಹೆಂಗಸು ಹೆಗಲ ಮೇಲೆ ಒಂದು ಚೀಲವನ್ನು ಹಿಡಿದುಕೊಂಡು ಹೋಗುತ್ತಿರುವುದು ಕಂಡುಬರುತ್ತದೆ ಎಂದು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಅಂತಹ ದೃಶ್ಯಾವಳಿ ನಿಪಿ.5 ರಲ್ಲಿ ಕಂಡುಬರುತ್ತಿಲ್ಲ ಎನ್ನುವುದು ಸರಿಯಲ್ಲ.

34. ನಾನು ಮಹಜರ್ ಗೆ ಎಲ್ಲಿ ಸಹಿ ಮಾಡಿದ್ದೇನೆ ಎಂಬುದನ್ನು ಮರೆತಿದ್ದೇನೆ, ಪ್ರಿಂಟ್ ತೆಗೆದುಕೊಂಡು ಬಂದಿದ್ದಾರೆ, ಆಗ ರುಜು ಮಾಡಿದ್ದೇನೆ. ಸಾಕ್ಷಿಯು ಸ್ವತಃ ಬ್ಯಾಕ್‌ಅಪ್ ತೆಗೆದ ನಂತರದಲ್ಲಿ ರುಜು ಮಾಡಿದ್ದೇನೆ ಎಂದು ಉತ್ತರಿಸಿದ್ದಾರೆ.

35. ನಿಪಿ.6 ರಂತೆ ಪೋಟೋಗಳನ್ನು ತೆಗೆದಿದ್ದಾರೆ ಎಂದು ಎಂದು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಅಂತಹ ಪೋಟೋಗಳನ್ನು ಸ್ಥಳದಲ್ಲಿ ತೆಗೆದೇ ಇಲ್ಲ ಎನ್ನುವುದು

ಸರಿಯಲ್ಲ.

36. ರಾಜು ಮನೆಯಿಂದ ನಾವು ನೀರಾವರಿ ಇಲಾಖೆಯ ಮ್ಯಾನಿಟರಿಂಗ್ ರೂಂ ಗೆ ಸಂಜೆ 4.30 ಗಂಟೆಗೆ ಹೋಗಿರುತ್ತೇವೆ. ಅಲ್ಲಿ ನಾನು ನೋಡಿದ್ದೇನೆ ಎನ್ನಲಾದ ದೃಶ್ಯಾವಳಿಯಲ್ಲಿ ಕಂಡುಬರುವ ಜಾಗವು ಸಾರ್ವಜನಿಕರು ಬಸ್ಸಿಗಾಗಿ ಕಾಯುವ ಮತ್ತು ಇಳಿಯುವ ಸ್ಥಳ ಎನ್ನುವುದು ಸರಿ.

37. ಇವತ್ತು ಇರುವ ತಾಂತ್ರಿಕತೆಯಲ್ಲಿ ಒಂದುವರೆ ಕಿ ಮೀ ವರೆಗೆ ಇರುವ ದೃಶ್ಯಾವಳಿಯನ್ನು ನಿಖರವಾಗಿ ಗುರ್ತಿಸಬಹುದು ಎನ್ನುವುದು ಸರಿ. ಆ ದೃಶ್ಯಾವಳಿಯಲ್ಲಿ ಕಂಡುಬಂದ ಬಸ್ ನ ನಂಬರ್ ನ್ನು ಕಂಡುಹಿಡಿಯಬಹುದಿತ್ತು ಎನ್ನುವುದು ಸರಿಯಲ್ಲ. ಈಗಾಗಲೇ ದಾಖಲುಗೊಂಡಿರುವ ದೃಶ್ಯಾವಳಿಯನ್ನು ಜೂಮ್ ಮಾಡಿ ನೋಡಲು ಸಾಧ್ಯವಿಲ್ಲ. ಆ ರೀತಿ ದೃಶ್ಯಾವಳಿಯನ್ನು ಜೂಮ್ ಮಾಡಿ ನೋಡುವ ತಾಂತ್ರಿಕ ವ್ಯವಸ್ಥೆ ಇದ್ದರೂ ಕೂಡ ಸಾಧವಿಲ್ಲ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಆ ರೀತಿ ನಾನು ನೋಡಿದ ದೃಶ್ಯಾವಳಿಯಲ್ಲಿ ನಡೆದುಕೊಂಡು ಬಂದು ಬಸ್ ಗೆ ಹತ್ತಿದ ವ್ಯಕ್ತಿ ಯಾರು ಎಂದು ಗುರ್ತಿಸಲು ಸಾಧ್ಯವಿಲ್ಲ ಎನ್ನುವುದು ಸರಿ.

38. ಕೆ ಆರ್ ಸಾಗರದಲ್ಲಿ ಭಾನುವಾರದ ದಿವಸ ಸಂತೆ ಇರುತ್ತದೆ. ಬೆಳಗಿನ ಜಾವ 3.30 ಗಂಟೆಗೆ ಜನರ ಓಡಾಟ

ಪ್ರಾರಂಭವಾಗುತ್ತದೆ.

39. ಬೃಂದಾವನ ಗಾರ್ಡನ್ ನಲ್ಲಿ ದೃಶ್ಯಾವಳಿಯ ಬ್ಯಾಕ್‌ಅಪ್ ತೆಗೆದ ನಂತರ ರುಜು ಮಾಡಿದ್ದೇನೆ. ಆದರೆ ಆ ರುಜುವನ್ನು ಎಲ್ಲಿ ಮಾಡಿದ್ದೇನೆ ಎನ್ನುವುದು ನೆನಪಿಲ್ಲ.

40. ಅದಾದ ನಂತರ ನನ್ನನ್ನು ಅದೇ ದಿನ ಕೆ ಆರ್ ಸಾಗರದ ಬೃಂದಾವನ ಗಾರ್ಡ್ ನಲ್ಲಿರುವ ಸೆಕ್ಯುರಿಟಿ ಮಾನಿಟರ್ ರೂಂ ಗೆ ಕರೆದುಕೊಂಡು ಹೋಗಿದ್ದಾರೆ . ಅಲ್ಲಿಯೂ ಕೂಡ ನಾನು ಸಿಸಿಕ್ಯಾಮೆರಾದ ಬ್ಯಾಕ್ ಅಪ್ ಅನ್ನು ದಿಃ 6.2.22 ರ ಬೆಳಗಿನ ಜಾವ 5.34 ಗಂಟೆಯಿಂದ ನಂತರದ 1 ನಿಮಿಷದ ದೃಶ್ಯಾವಳಿಯನ್ನು ಸ್ಯಾಂಡಿಕ್ ಕಂಪನಿಯ 32 ಜಿಬಿಯ ನ್ಯಾಯಾಲಯದ ಮುಂದಿರುವ ನಿಪಿ 27 ರ ಪೆನ್ ಡ್ರೈವ್ ಮೂಲಕ ಸಂಗ್ರಹಿಸಿಕೊಟ್ಟಿದ್ದೇನೆ .

41. ನಾನು ಸಂಗ್ರಹಿಸಿಕೊಟ್ಟ ದೃಶ್ಯಾವಳಿಯ ಪ್ರಕಾರ ಅರಳಿಕಟ್ಟೆಯಲ್ಲಿ ಒಬ್ಬ ಹೆಂಗಸು ಕುಳಿತುಕೊಂಡಿರುವುದು ಮತ್ತು ಬಸ್ ಬಂದ ತಕ್ಷಣ ಅದಕ್ಕೆ ಹತ್ತಿ ಹೋಗುತ್ತಿರುವುದು ಕಂಡುಬಂತು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

42. ಆ ರೀತಿ ದೃಶ್ಯಾವಳಿಯನ್ನು ಸಂಗ್ರಹಿಸಿಕೊಟ್ಟಾಗ

ಪೊಲೀಸರು ನನ್ನ ಸಮಕ್ಷಮದಲ್ಲಿ ನಿಪಿ.26 ರೀತಿಯ ಪಂಚನಾಮೆ ಮಾಡಿ ನನ್ನ ರುಜುವನ್ನು 26ಬಿ ಪಡೆದುಕೊಂಡಿದ್ದಾರೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

43. ಆ ದಿವಸ ನಾನು ಸಂಗ್ರಹಿಸಿಕೊಟ್ಟ ದೃಶ್ಯಾವಳಿಯನ್ನು ನೋಡಿದೆ, ಅದರ ಪ್ರಕಾರ ಒಬ್ಬ ಹೆಂಗಸು ಇರುವುದು ಕಂಡುಬರುತ್ತದೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

44. ನಿಪಿ 27ರ ಪೆನ್ ಡ್ರೈವ್ ನಲ್ಲಿ ಕ್ಯಾಮೆರಾ ಸಂಃ 6 ರಲ್ಲಿ ದಾಖಲುಗೊಂಡಿರುವ ದೃಶ್ಯಾವಳಿ ಇದೆ, ಆ ದೃಶ್ಯಾವಳಿಯ ಪ್ರಕಾರ ನಾರ್ತ್ ಬ್ಯಾಂಕ್ ಕಡೆಯಿಂದ ಬಂದ ಬಸ್ ಗೆ ಒಬ್ಬ ಹೆಂಗಸು ಓಡಿಕೊಂಡು ಹೋಗಿ ಹತ್ತುತ್ತಿರುವುದು ಕಂಡುಬರುತ್ತದೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

45. ಮರುದಿನ ನಾನು ಬೆಲವತ್ತದಲ್ಲಿ ಬ್ಯಾಕ್‌ಅಪ್ ತೆಗೆದಿದ್ದೇನೆ. ಆ ದಿವಸ ನಾನು ಮಧ್ಯಾಹ್ನದ ಸಮಯದಲ್ಲಿ ವೆಂಕಟೇಶ್ ರವರ ಮನೆಗೆ ಹೋಗಿರುತ್ತೇನೆ. ಅಂಗಡಿಯ ಮುಂಭಾಗದಲ್ಲಿ

ಎರಡು ಕ್ಯಾಮರಗಳು ಮತ್ತು ಅಂಗಡಿಯ ವ್ಯವಹಾರವನ್ನು ಸಂಗ್ರಹಿಸುವ ಸಂಬಂಧ ಎರಡು ಕ್ಯಾಮರಗಳನ್ನು ಹಾಕಿದ್ದರು. ಆ ಕ್ಯಾಮರಗಳು 2 ಎಂ ಪಿ ಯ ಹೆಚ್ ಡಿ ಕ್ಯಾಮರಗಳು.

46. ನಿಪಿ.9 ರಲ್ಲಿ ಕಂಡುಬರುವ ವ್ಯಕ್ತಿಗಳ ಪೈಕಿ ಹೆಂಗಸಿನ ಗುರ್ತನ್ನು ಕಂಡುಹಿಡಿದವರು ಯಾರು ಎಂಬುದು ನನಗೆ ಗೊತ್ತಿಲ್ಲ. ಹೆಂಗಸನ್ನು ಯಾರು ಗುರ್ತಿಸಿದರು ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಎನ್ನುವುದು ಸರಿ. ನಿಪಿ.9 ರ ಫೋಟೋದಲ್ಲಿ ಮೃತೆಯ ಗಂಡ ಯಾರು ಎಂದು ನನಗೆ ಗುರ್ತಿಸಲು ಸಾಧ್ಯವಿಲ್ಲ.

47. ಮರುದಿನ ನನ್ನನ್ನು  ಪೊಲೀಸರು ಬೆಲವತ್ತ ಗ್ರಾಮದ ವೆಂಕಟೇಶ್ ರವರ ಮನೆ ಮತ್ತು ಚಿಲ್ಲರೆ ಅಂಗಡಿಗೆ ಅಳವಡಿಸಲಾದ ಸಿಸಿಕ್ಯಾಮೆರಾದ ದೃಶ್ಯಾವಳಿಯನ್ನು ಸಂಗ್ರಹಿಸುವ ಸಂಬಂಧವಾಗಿ ಕರೆದುಕೊಂಡು ಹೋಗಿದ್ದಾರೆ ಎಂದು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

17. ಅಲ್ಲಿಯ ಕ್ಯಾಮೆರಾ ಸಂಃ 1 ರ ದೃಶ್ಯಾವಳಿಯನ್ನು ಗಮನಿಸಿದಾಗ ದಿಃ 6.2.22 ರಂದು ಬೆಳಗ್ಗೆ 6.47 ನಿಮಿಷದಿಂದ 6.48 ಸಮಯದಲ್ಲಿ ಒಬ್ಬ ಮಹಿಳೆ ಬ್ಯಾಗನ್ನು ತೆಗೆದುಕೊಂಡು ವರುಣಾನಾಲೆಯ ಕಡೆಗೆ ಹೋಗುತ್ತಿರುವುದು ಮತ್ತು ಅದೇ

ದಿನ 6.50 ನಿಮಿಷದಿಂದ 6.51 ನಿಮಿಷದ ಸಮಯದಲ್ಲಿ ಬರಿಗೈನಲ್ಲಿ ವಾಪಸ್ ಬರುತ್ತಿರುವುದು ಕಂಡುಬರುತ್ತದೆ, ಆ ಸಂದರ್ಭದಲ್ಲೂ ಕೂಡ ಗಂಗಾರಾಮ್ ನಮ್ಮ ಜೊತೆಯಲ್ಲಿದ್ದರು, ಆತನು ಆ ಹೆಂಗಸು ಲಕ್ಷ್ಮಿ ಎಂದು ಗುರುತಿಸಿರುತ್ತಾನೆ ಎಂದು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

48. ವೆಂಕಟೇಶ ರವರ ಮನೆಯಲ್ಲಿ ದೃಶ್ಯಾವಳಿಯನ್ನು ಸಂಗ್ರಹಿಸಿದ ನಂತರದಲ್ಲಿ ರುಜು ಮಾಡಿದ್ದೇನೆ, ಆದರೆ ಎಲ್ಲಿ ರುಜು ಮಾಡಿದ್ದೇನೆ ಎಂದು ನೆನಪಿಗೆ ಬರುತ್ತಿಲ್ಲ.

49. ರಾಜು ಮನೆಗೆ ಹೋಗಿ, ಬೃಂದಾವನ ಗಾರ್ಡನ್ ನ ಸೆಕ್ಯೂರಿಟಿ ಮಾನಿಟರ್ ರೂಂ ಗೆ ಹೋಗಿ ಮತ್ತು ವೆಂಕಟೇಶನ ಅಂಗಡಿ ಮನೆಗೆ ಹೋಗಿ ಸಿಸಿ ಕ್ಯಾಮಾರದ ದೃಶ್ಯಾವಳಿಗಳನ್ನು ಸಂಗ್ರಹಿಸಿಕೊಟ್ಟಿದ್ದೇನೆ ಎಂದು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

50. ಪೆನ್‌ಡ್ರೈವ್ ನಲ್ಲಿರುವ ದೃಶ್ಯಾವಳಿಗಳು ನೈಜತೆಯಿಂದ ಕೂಡಿಗೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)